(ರೂ. ಕೋಟಿಗಳಲ್ಲಿ)

ಕ್ರ.ಸಂ	ವರ್ಷ	ನಿಗದಿಪಡಿಸಲಾದ ಅನುದಾನ
1	2005–06	8.00
2	2006–07	15.20

ಈ ಅನುದಾನವನ್ನು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳುವ ಸಲುವಾಗಿ ನಿಗದಿ ಪಡಿಸಿದೆ.

ಈ) ಹೌದು

ಉ) ವಿದ್ಯಾವಂತ ನಿರುದ್ಯೋಗಿಗಳು ಈ ಸಂಘಟನೆಗೆ ಸೇರದಂತೆ ಮಾಡಲು ಕರ್ನಾಟಕ ರಾಜ್ಯ ಪೊಲೀಸ್ ಹೌಸಿಂಗ್ ಕಾರ್ಪೊರೇಷನ್ ವತಿಯಿಂದ ಮಲೆನಾಡು ಪ್ರದೇಶದ ಬುಡಕಟ್ಟು ಯುವಕರಿಗೆ ವೃತ್ತಿಪರ ತರಬೇತಿಯನ್ನು ಆಗುಂಬೆಯಲ್ಲಿ ಕೊಡಲಾಗುತ್ತಿದೆ. 2004 ರಿಂದ '2007 (ಜನವರಿ) ರವರೆಗೆ 240 ನಿರುದ್ಯೋಗಿ ಯುವಕರಿಗೆ ವೃತ್ತಿಪರ ತರಬೇತಿ ಕೊಡಲಾಗಿದೆ.

ಈ ಸಂಬಂಧ ವಿವರಗಳುಳ್ಳ ಟಿಪ್ಪಣಿಯನ್ನು ಲಗತ್ತಿಸಿದೆ.

364 (648) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಮೆಟ್ರೋ ರೈಲು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ, ಈ ಯೋಜನೆಯ ಕಾಮಗಾರಿಯನ್ನು ಯಾವಾಗ ಆರಂಭಿಸಲಾಗುವುದು;

ಇ) ಈ ಯೋಜನೆಯಿಂದ ನಿರ್ವಸಿತರಾಗುವವರಿಗೆ ಯಾವ ಆಧಾರದ ಮೇಲೆ ಪರಿಹಾರ ಧನ ನಿರ್ಧರಿಸಲಾಗುವುದು ಹಾಗೂ ಇದಕ್ಕಾಗಿ ನಿಗದಿಪಡಿಸಲಾಗಿರುವ ಅನುದಾನ ಎಷ್ಟು;

ಈ) ಈ ಯೋಜನೆ ಅನುಷ್ಠಾನಕ್ಕಾಗಿ ಇಲ್ಲಿಯವರೆಗೆ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಹಾಗೂ ವಿತರಿಸಲಾಗಿರುವ ಪರಿಹಾರದ ಮೊತ್ತ ಎಷ್ಟು;

ಉ) ಈ ಯೋಜನೆಯ ಭೂಸ್ವಾಧೀನದ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗಿವೆಯೇ;

ಊ) ಹಾಗಿದ್ದಲ್ಲಿ, ಯೋಜನೆಯ ಶೀಘ್ರ ಅನುಷ್ಠಾನಕ್ಕಾಗಿ ನಿಗಮ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ) ಹೌದು

ಆ) ದಿನಾಂಕ:2–10–2006 ರಂದು ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ

ಇ) ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಕಾಯಿದೆ, 1966ರ ಪ್ರಕಾರ ಯುಕ್ತ ಭೂ ಪರಿಹಾರವನ್ನು ಕೆ.ಐ.ಎ.ಡಿ.ಬಿ ವಿಶೇಷ ಭೂಸ್ವಾಧೀನಾಧಿಕಾರಿ, ಯವರಿಂದ ಸೆಕ್ಷನ್ 29(2) ಪ್ರಕಾರ ಪರಸ್ಪರ ವಿಚಾರಣೆ ಮೂಲಕ ಹಾಗೂ ಅವಾರ್ಡ್ ಮೂಲಕ ನಿಗದಿಪಡಿಸಲಾಗುವುದು. ಭೂ ಮಾಲೀಕರಿಗೆ ವಿಶೇಷ ಭೂಸ್ವಾಧೀನ ಪರಿಹಾರವನ್ನು ಮಾರುಕಟ್ಟೆ ಮೌಲ್ಯ ನಿರ್ಧಾರಣೆಯ ಮೂಲಕ ಹಾಗೂ ಲೋಕೋಪಯೋಗಿ ಇಲಾಖೆ ಸೂತ್ರದ ಪ್ರಕಾರ ಕಟ್ಟಡ ಕಳೆದುಕೊಂಡವರಿಗೆ ಸ್ಥಳಾಂತರ ವೆಚ್ಚವನ್ನು ನೀಡಲಾಗುವುದು. ವಸತಿ ಮತ್ತು ವ್ಯಾಪಾರ ಸಂತ್ರಸ್ಥರಿಗೆ ಭತ್ಯೆ ನಿಡುವ ಮೂಲಕ ಅವರ ತೊಂದರೆ ಪರಿಹರಿಸಲಾಗುವುದು. ಈ ಬಾಬ್ತು ರೂ. 600/– (ಆರು ನೂರು) ಕೋಟಿ ಅನುದಾನ ಕಾದಿರಿಸಲಾಗಿದೆ.

ಈ) ಯೋಜನೆ ಅನುಷ್ಠಾನಕ್ಕಾಗಿ ಒಟ್ಟು 227.978 ಎಕರೆ ಜಮೀನು ಬೇಕಾಗಿದೆ. ಈ ಪೈಕಿ 201.078 ಸರ್ಕಾರಿ ಮತ್ತು ಸರ್ಕಾರಿ ಒಡೆತನ ಹೊಂದಿರುವ ಸಂಸ್ಥೆಗಳ ಜಮೀನು ಹಾಗೂ 26.90 ಎಕರೆ ಖಾಸಗಿ ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತಿದ್ದು ಈವರೆಗೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ 127.538 ಎಕರೆ ಜಮೀನುಗಳನ್ನು ವಶಪಡಿಸಿಕೊಂಡಿದ್ದು, ಈ ಬಾಬ್ತು 125.36 ಕೋಟಿ ಪರಿಹಾರವನ್ನು ಪಾವತಿಸಲಾಗಿದೆ. ಖಾಸಗಿಯವರಿಗೆ ಇದುವರೆವಿಗೆ ಭೂಸ್ವಾಧೀನ ಪರಿಹಾರ ನೀಡಿರುವುದಿಲ್ಲ.

ಉ) ಹೌದು

ಊ) 1. ಪ್ರಕರಣಗಳನ್ನು ಇತ್ಯರ್ಥ ಮಾಡಲು ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿದೆ.

2. ಸದರಿ ಪ್ರಕರಣಗಳಲ್ಲಿ ತಡೆಯಾಜ್ಞೆಗಳಿರುವುದಿಲ್ಲ.

3. ಕೆಳಕಂಡ ಷೆಡ್ಯೂಲ್ ಪ್ರಕಾರ ಪ್ರಾಜೆಕ್ಟ್ ಆಯುಕ್ತಗೊಳಿಸಲಾಗಿದೆ.

ಎ) ಪ್ರಾಜೆಕ್ಟ್ ಜನರಲ್ ಕನ್ಸಲ್ ಟೆಂಟ್ ನೇಮಕಾತಿ	1-5-06 ರಿಂದ 15-5-07
ಬಿ) ಭೂಸ್ವಾಧೀನ ಕ್ರಮ	27-4-06 ರಿಂದ 2-3-07
ಸಿ) ಪೂರ್ವ ಪಶ್ಚಿಮ ಮಾರ್ಗ 1(7 ಕಿ.ಮೀ) ಎತ್ತರಿಸಿದ ಮಾರ್ಗ ರೀಚ್-1	27-4-06 ರಿಂದ 31-3-10
ಡಿ) ಪೂರ್ವ ಪಶ್ಚಿಮ, ಉತ್ತರ ದಕ್ಷಿಣ ಮಾರ್ಗ ಸುರಂಗ ಮಾರ್ಗ (6.8 ಕಿಮೀ) ರೀಚ್-5	16-5-07 ರಿಂದ 15-9-11
ಇ) ಉತ್ತರ ದಕ್ಷಿಣ ಉತ್ತರ ಭಾಗದ ಎತ್ತರಿಸಿದ ಮಾರ್ಗ (6.7 ಕಿಮೀ) ರೀಚ್-3	16-5-07 ರಿಂದ 30-11-10
ಈ) ಪೂರ್ವ ಪಶ್ಚಿಮ ಪಶ್ಚಿಮ ಭಾಗದ ಎತ್ತರಿಸಿದ ಮಾರ್ಗ (7.45 ಕಿ.ಮೀ) ರೀಚ್-2	16-5-07 ರಿಂದ 31-10-11
ಉ) ಉತ್ತರ ದಕ್ಷಿಣ ಮಾರ್ಗ, ದಕ್ಷಿಣ ಭಾಗದ ಎತ್ತರಿಸಿದ ಮಾರ್ಗ (5.15 ಕಿ.ಮೀ) ರೀಚ್-4	16-5-07 ರಿಂದ 31-12-11

335 (649) Sri Dinesh Gundurao (Gandhinagara) : Sri H.D. Revanna Public Works and Energy Minister

1) How many KM of Road Construction being taken up in Bangalore Mysore Nice Road works;

2) Provide information about already completed roads;

3) Is it true that in this project construction of peripheral ring roads are being done to connect the main road;

4) How many roads are being constructed like this;

5) For this project, how much of lands that have being acquired by the Government have being taken back;